Expenditure incurred towards Sports Wing of Karnataka Electricity Board.

418 SRI BHAVU RAO DESHPANDE (Dharwar) [on behalf of SRI RAMA BHAT (Puttur)].—Will the Chief Minister be pleased to state.

(a) what are the recreation facilities extended to KEB employees;

(b) how much amount is spent so far towards the sports wing of the KEB from out of the Board Funds (year-wise figures for the last ten years may be furnished);

(c) whether regular audit has been conducted on the amount spent on sports by the Karnataka Electricity Board ?

SRI R. GUNDU RAO. (Chief Minister)—

(a) Even though the Electricity Board was formed in the year 1957, it was only during the year 1974, the KEB which has about 40,000 employees formed KEB Sports Organisation.

(b) During the period of six years commencing from April, 1974, a sum of Rs. 4,43,575.62 was spent up to the end of March, 1979 for which year-wise figures are furnished hereunder.

Year		Amount Rs. Ps.
1973-74	...	1,01,308-65
1974-75	...	71,809-95
1975-76	...	54,551-86
1976-77	...	68,548-07
1977-78	...	85,585-03
1978-79	...	61,772-06
Total	...	4,43 575-62

(c) Yes

ಶ್ರೀ ಬಾವೂರಾವ್ ದೇಶಪಾಂಡೆ.—ಸ್ವಾಮಿ, ವಿದ್ಯುಚ್ಛಕ್ತಿ ಮಂಡಲಿಯು ನೌಕರರಿಗೆ ಏನೇನು ಮನರಂಜನಾ ಸೌಲಭ್ಯಗಳನ್ನು ಒದಗಿಸಿದ್ದೀರಿ ? ಅವರು ಏನೇನು ಕೇಳಿದ್ದಾರೆ ?

ಶ್ರೀ ಆರ್. ಗುಂಡೂರಾವ್.—ಈ ಮಂಡಲಿಯಲ್ಲಿ ಇಷ್ಟೇ ಹಣವನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿರುತ್ತೇವೆ. ಅವರು ಅದಕ್ಕನುಸಾರವಾಗಿ ತಮ್ಮ ತಮ್ಮ ಮನರಂಜನಾ ಕಾರ್ಯಕ್ರಮ ಹಾಗೂ ಇತರೇ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಬೇಕು. ಅವರು ನಾಟಕ ಬೇಕಾದರೂ ಮಾಡಬಹುದು, ಆಟಪಾಠಗಳಿಗೆ ಬೇಕಾದರೂ ಖರ್ಚುಮಾಡಬಹುದು ಅಥವಾ ಇನ್ನಾವುದೇ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು.

ಶ್ರೀ ಭಾವೂರಾವ್ ದೇಶಪಾಂಡೆ.—ಕಳೆದ ೬ ವರ್ಷಗಳಲ್ಲಿ ಎಲ್ಲಿ ಎಷ್ಟು ಹಣ ಸಂಗ್ರಹವಾಗಿತ್ತು ? ಮತ್ತು ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಎಷ್ಟು ಸಂಗ್ರಹವಾಗಿತ್ತು ಎಂಬ ವಿವರ ನನ್ನ ಹತ್ತಿರ ಇಲ್ಲ.